ಸಂವೇದನೆಯಾಗಲಿ, ಗೌರವವಾಗಲಿ ಅವರಿಗಿದ್ದರೆ ಇಂಥ ಮಾತುಗಳೇ ಬರುತ್ತಿರಲಿಲ್ಲ ಬಿಡಿ.

ಹಾಗೆ ನೋಡಿದರೆ ಮೀಡಿಯಾದವರೂ ಈ ಎಲ್ಲ ವಿಷಯವನ್ನು ಮರೆತಿಲ್ಲ. ಇತ್ತೀಚೆಗೆ ವೆಬ್‌ತಾಣದ ನಿರೂಪಕಿಯೊಬ್ಬಳು ಈ ಕುರಿತು ಪರೋಕ್ಷವಾಗಿ ಕೆದಕಿದಾಗ ರಕ್ಷಿತ್, 'ನನ್ನ ಬಳಿ ಏನಿದೆಯೋ ಅದರ ಬಗ್ಗೆ ನನಗೆ ಖುಷಿಯಿದೆ. ಇಲ್ಲದಿರುವುದರ ಬಗ್ಗೆ ದುಃಖ ಇಲ್ಲ' ಎಂದು ಘನತೆಯಿಂದಲೇ ಉತ್ತರಿಸಿದ್ದರು.



ನಟ – ನಟಿಯರಿಗೂ ಒಂದು ವೈಯಕ್ತಿಕ ಬದುಕಿರುತ್ತದೆ. ಅದರಲ್ಲಿ ಮೂಗು ತೂರಿಸಲು ನಾವು ಯಾರೂ ಅಲ್ಲ, ನಮಗೆ ಯಾರೂ ಅಂಥ ಅಧಿಕಾರ ಕೊಟ್ಟಿಲ್ಲ ಎಂಬುದನ್ನು ಯಾರೂ ಮರೆಯಬಾರದು. ಅಭಿಮಾನವೆಂಬುದು ಅಮಲಾದಾಗ ಮಾತ್ರ ಇಂಥ ವಿಕೃತಿಗಳು ಘಟಿಸುತ್ತವೆ. ಅಭಿಮಾನವೆಂಬುದು ಎಚ್ಚರವಾದಾಗ ಅದರಿಂದ ರಚನಾತ್ಮಕ ಕಾರ್ಯಗಳು ನಡೆಯುತ್ತವೆ. ಈ ಬಗ್ಗೆ ತಿಳಿವಳಿಕೆ ಮೂಡಿಸುವ ಜವಾಬ್ದಾರಿ ನಟ–ನಟಿಯರಿಗೂ ಇದ್ದೇ ಇದೆ. ■

# ಪಸಂದಾಗಿದೆ ದಿಲ್



'ಲವ್ ಮಾಕ್ಟೇಲ್' ಸಿನಿಮಾ ನಂತರ ಡಾರ್ಲಿಂಗ್ ಕೃಷ್ಣ ಅವರ ಅವರ ಅದೃಷ್ಟ ಬದಲಾಗಿದೆ. ಕೃಷ್ಣ ಅವರು ನಟಿಸುತ್ತಿರುವ ಚಿತ್ರಗಳು ಸಾಲು ಸಾಲಾಗಿ ಸೆಟ್ಟೇರಿವೆ. ಅವುಗಳಲ್ಲಿ ಹಲವು ಚಿತ್ರೀಕರಣ ಮುಗಿಸಿ ಇನ್ನೇನು ತೆರೆಗೆ ಬರಲು ಸಜ್ಜಾಗಿವೆ.

ಡಾರ್ಲಿಂಗ್ ಕೃಷ್ಣ ಮತ್ತು ನಿಶ್ವಿಕಾ ನಾಯ್ಡು ನಟಿಸಿರುವ 'ದಿಲ್ ಪಸಂದ್' ಕೂಡ ಸದ್ಯದಲ್ಲಿಯೇ ತೆರೆಗೆ ಬರುವ ಸೂಚನೆ ನೀಡಿದೆ. ಬಹುತೇಕ ಚಿತ್ರೀಕರಣ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಹಂತದದಲ್ಲಿರುವ ಈ ಚಿತ್ರದ ಫಸ್ಟ್ ಗ್ಲಿಂಪಸ್ ಅನ್ನು ತಂಡ ಇತ್ತೀಚೆಗೆ ಬಿಡುಗಡೆ ಮಾಡಿತ್ತು. ಜೂನ್ 12ರಂದು ಕೃಷ್ಣ ಹುಟ್ಟುಹಬ್ಬದಂದೇ ಬಿಡುಗಡೆ ಮಾಡಿ ಶುಭಾಶಯ ಕೋರಿರುವ ಚಿತ್ರತಂಡ, ಸದ್ಯದಲ್ಲಿಯೇ ಚಿತ್ರವನ್ನು ತೆರೆಗೆ ತರುವ ಸೂಚನೆಯನ್ನೂ ನೀಡಿದೆ.

ಸಿನಿಮಾದ ಪೋಸ್ಟರ್ ಮತ್ತು ಗ್ಲಿಂಪಸ್, ಈ ಚಿತ್ರ ರೊಮ್ಯಾಂಟಿಕ್ ಕಾಮಿಡಿ ಎಂಬುದನ್ನು ಹೇಳುತ್ತಿವೆ. ನಿಶ್ವಿಕಾ ಮತ್ತು ಕೃಷ್ಣ ಅವರ ಕಾಂಬಿನೇಷನ್ ಚೆನ್ನಾಗಿ ಕೆಲಸ ಮಾಡಿರುವ ಸೂಚನೆಯೂ ಅದರಲ್ಲಿದೆ. ರಸಿಕರ ದಿಲ್‌ಗೆ ಪಸಂದು ಅನಿಸುವಂಥ ದೃಶ್ಯಗಳಂತೂ ಈ ಸಿನಿಮಾದಲ್ಲಿ ಸಾಕಷ್ಟು ಇರಲಿವೆ. ಸುಮಂತ್ ಕ್ರಾಂತಿ ನಿರ್ಮಿಸಿರುವ ಈ ಸಿನಿಮಾವನ್ನು ಶಿವ ತೇಜಸ್ ನಿರ್ದೇಶಿಸಿದ್ದಾರೆ. ಅರ್ಜುನ್ ಜನ್ಯ ಸಂಗೀತ ಸಂಯೋಜನೆ ಮಾಡಿದ್ದಾರೆ. ಮೇಘ ಶೆಟ್ಟಿ, ಸಾಧು ಕೋಕಿಲ, ರಂಗಾಯಣ ರಘು, ತಬಲಾ ನಾಣಿ, ಚಿತ್ಕಲಾ ಬೀರಾದಾರ್, ಅರುಣಾ ಬಾಲರಾಜ್ ಮುಂತಾದವರು ತಾರಾಗಣದಲ್ಲಿದ್ದಾರೆ. ■

250 ಕೋಟಿ ಬೆಲೆಬಾಳುವ, ಕಣ್ಣು ಕೋರೈಸುವ ಗೆಲುವನ್ನೂ ದಾಖಲಿಸಿತು. 'ಹೊಂಬಾಳೆ ಫಿಲ್ಮ್ಸ್'ಗೆ ರಾಷ್ಟ್ರಮಟ್ಟದಲ್ಲಿ ಗುರುತು ಕೊಟ್ಟಿದ್ದೂ ಈ ಕೆಜಿಎಫ್ ಚಿನ್ನವೇ! ಮೊದಲ ಭಾಗದ ಗೆಲುವಿನ ಬಾವುಟದಲ್ಲಿಯೇ, ಎರಡನೇ ಭಾಗದ ಯಶಸ್ಸಿನ ಭವಿಷ್ಯವೂ ಬರೆದುಕೊಂಡಿತ್ತು. ಎಣಿಕೆಯಂತೆಯೇ 'ಕೆ.ಜಿ.ಎಫ್. 2' ಸಾವಿರ ಕೋಟಿ ರೂಪಾಯಿ ಗುರಿಯ ಹಲಗೆಯನ್ನೂ ಚಿಂದಿ ಮಾಡಿದೆ.

ಕನ್ನಡದ ಚಿತ್ರವನ್ನು ಬಹುಭಾಷೆಯಲ್ಲಿ ಗೆಲ್ಲಿಸುವುದರ ಜೊತೆಗೇ ಬೇರೆ ಭಾಷೆಯ ನಟರ ಸಿನಿಮಾಗಳ ನಿರ್ಮಾಣಕ್ಕೂ ಹೊಂಬಾಳೆ ಫಿಲ್ಮ್ಸ್ ಮುಂದಾಗಿದೆ. ಪ್ರಭಾಸ್ ಅಭಿನಯದ 'ಸಲಾರ್' ಸಿನಿಮಾ ನಿರ್ಮಾಣ ಮಾಡುತ್ತಿವ ಮೂಲಕ ತೆಲುಗಿನ ಅಂಗಳದಲ್ಲಿ ಗಟ್ಟಿ ಹೆಜ್ಜೆ ಇಟ್ಟಿರುವ ಸುದ್ದಿಯಂತೂ ತಿಳಿದೇ ಇದೆ. ಸುಧಾ ಕೊಂಗುರ ಅವರ ನಿರ್ದೇಶನದ ಇನ್ನೊಂದು ಚಿತ್ರವನ್ನೂ ಹೊಂಬಾಳೆ ನಿರ್ಮಾಣ ಮಾಡುತ್ತಿರುವುದಾಗಿ ಪ್ರಕಟಿಸಿದೆ.

ಅದನ್ನು ಬಿಟ್ಟು ಕನ್ನಡದಲ್ಲಿಯೂ ಹೊಂಬಾಳೆ ನಿರ್ಮಿಸುತ್ತಿರುವ ಸಿನಿಮಾಗಳ ಪಟ್ಟಿ ಸಣ್ಣದೇನಿಲ್ಲ. ಸಂತೋಷ್ ಆನಂದ್‌ರಾಮ್ ನಿರ್ದೇಶನದ 'ರಾಘವೇಂದ್ರ ಸ್ಟೋರ್', ರಿಷಭ್ ಶೆಟ್ಟಿ ನಿರ್ದೇಶನದ 'ಕಾಂತಾರ', ರಕ್ಷಿತ್ ಶೆಟ್ಟಿ ನಿರ್ದೇಶನದ 'ರಿಚರ್ಡ್ ಆ್ಯಂಟನಿ', ಪ್ರಕಾಶ್ ನೀಲ್ ಕಥೆ ಬರೆದು, ಸೂರಿ ನಿರ್ದೇಶಿಸುತ್ತಿರುವ 'ಬಘೀರ' ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.




ಇದೀಗ ಇನ್ನೊಂದು ಹೆಜ್ಜೆ ಮುಂದಕ್ಕೆ ಹೋಗಿರುವ ಹೊಂಬಾಳೆ, ಮಲಯಾಳಂ ಚಿತ್ರರಂಗದ ಪೃಥ್ವಿರಾಜ್ ಸಿನಿಮಾ ನಿರ್ಮಾಣ ಮಾಡುವ ಮೂಲಕ ಮಾಲಿವುಡ್‌ನಲ್ಲಿಯೂ ತಮ್ಮ ಸಹಿ ಹಾಕಲು ಮುಂದಾಗಿದೆ. ಪೃಥ್ವಿರಾಜ್ ಸುಕುಮಾರನ್ ಮುಖ್ಯಪಾತ್ರದಲ್ಲಿ ನಟಿಸಿ, ನಿರ್ದೇಶಿಸಲಿರುವ ಈ ಸಿನಿಮಾಗೆ ಮುರಳಿ ಗೋಪಿ ಎನ್ನುವವರು ಕಥೆ, ಚಿತ್ರಕಥೆ ಬರೆದಿದ್ದಾರೆ. 'ಟೈಸನ್' ಎಂಬ ಹೆಸರಿನ ಈ ಆ್ಯಕ್ಷನ್ ಪ್ರಧಾನವಾದ ಸೋಷಿಯೊ ಥ್ರಿಲ್ಲರ್ ಸಿನಿಮಾ, ಮಲಯಾಳಂ ಭಾಷೆಯ ಜೊತೆಗೆ ಕನ್ನಡ, ತಮಿಳು, ತೆಲುಗು, ಹಿಂದಿ ಭಾಷೆಗಳಲ್ಲಿಯೂ ತೆರೆಕಾಣಲಿದೆ. ಈ ಚಿತ್ರ 2023ರ ಕೊನೆಯಲ್ಲಿ ತೆರೆಕಾಣುವ ನಿರೀಕ್ಷೆ ಇದೆ.

ಸದ್ಯಕ್ಕೆ ಇಷ್ಟು ಮಹತ್ವಾಕಾಂಕ್ಷಿಯಾಗಿ ಕೆಲಸ ಮಾಡುತ್ತಿರುವ ನಿರ್ಮಾಣ ಸಂಸ್ಥೆ ಕನ್ನಡದಲ್ಲಿಯಷ್ಟೇ ಏಕೆ? ಭಾರತ ಚಿತ್ರರಂಗದಲ್ಲಿಯೇ ಹೆಚ್ಚಿಲ್ಲ. ಕನ್ನಡ ಸಿನಿಮಾಗಳನ್ನು ನಿರ್ಮಾಣ ಮಾಡುತ್ತಲೇ ಬೇರೆ ಭಾಷೆಯ ಸಿನಿಮಾಗಳ ನಿರ್ಮಾಣಕ್ಕೂ ಕೈ ಹಾಕುತ್ತಿರುವ ಹೊಂಬಾಳೆಯ ವಿಜಯ ಯಾತ್ರೆ ಎಲ್ಲಿಯವರೆಗೆ ಮುಂದುವರಿಯುತ್ತದೆಯೋ ಕಾದುನೋಡಬೇಕು. ■